INSTAKAS



# ಪಿಎಂ ಸ್ವನಿಧಿ (PM SVANIDHI) ಯೋಜನೆಗೆ ಆರು ವರ್ಷಗಳ ಸಂಭ್ರಮ

PM SVANidhi

## ಇದೀಗ ಸುದ್ದಿಯಲ್ಲಿ:

ಬೀದಿ ಬದಿ ವ್ಯಾಪಾರಿಗಳಿಗೆ ಕೈಗೆಟಕುವ ದರದಲ್ಲಿ ಅಡಮಾನ ರಹಿತ (Collateral-free) ಸಾಲ, ಡಿಜಿಟಲ್ ಸೇರ್ಪಡೆ ಮತ್ತು ಸಾಮಾಜಿಕ ಭದ್ರತೆಯ ಮೂಲಕ ಸಬಲೀಕರಣಗೊಳಿಸುತ್ತಿರುವ **ಪ್ರಧಾನ ಮಂತ್ರಿ ಬೀದಿ ವ್ಯಾಪಾರಿಗಳ ಆತ್ಮನಿರ್ಭರ್ ನಿಧಿ (PM SVANidhi)** ಯೋಜನೆಯು ಯಶಸ್ವಿಯಾಗಿ ಆರು ವರ್ಷಗಳನ್ನು ಪೂರೈಸಿದೆ.

## ಪಿಎಂ ಸ್ವನಿಧಿ ಯೋಜನೆ



### ಹಣಕಾಸು ನೆರವು

ಕೇಂದ್ರ ವಲಯದ ಯೋಜನೆಯಾಗಿದೆ.

### ಪ್ರಾರಂಭ

1 ಜೂನ್ 2020

### ಉದ್ದೇಶ

ಕೋವಿಡ್-19 (COVID-19) ಸಾಂಕ್ರಾಮಿಕ ರೋಗದಿಂದ ಸಂಕಷ್ಟಕ್ಕೆ ಒಳಗಾದ ಬೀದಿ ಬದಿ ವ್ಯಾಪಾರಿಗಳಿಗೆ ಕೈಗೆಟಕುವ ದರದಲ್ಲಿ ದುಡಿಯುವ ಬಂಡವಾಳ ಸಾಲವನ್ನು (Working capital loans) ಒದಗಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

### ಅನುಷ್ಠಾನ ಪ್ರಾಧಿಕಾರ

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ (MoHUA)

### ಅರ್ಹತಾ ಮಾನದಂಡ

ನಗರ ಸ್ಥಳೀಯ ಸಂಸ್ಥೆಗಳು (ULBs) ನೀಡಿರುವ ಮಾರಾಟ ಪ್ರಮಾಣಪತ್ರ ಅಥವಾ ಗುರುತಿನ ಚೀಟಿಯನ್ನು ಹೊಂದಿರುವ ಬೀದಿ ಬದಿ ವ್ಯಾಪಾರಿಗಳು ಈ ಯೋಜನೆಗೆ ಅರ್ಹರಾಗಿರುತ್ತಾರೆ.

## ಪ್ರಮುಖ ಲಕ್ಷಣಗಳು

**ದುಡಿಯುವ ಬಂಡವಾಳ ಸಾಲ:** ಅರ್ಹ ವ್ಯಾಪಾರಿಗಳಿಗೆ ₹15,000, ₹25,000 ಮತ್ತು ₹50,000 ಗಳ ಅಡಮಾನ ರಹಿತ ಸಾಲ ಲಭ್ಯವಿರುತ್ತದೆ.

**UPI-ಸಂಯೋಜಿತ ರೂಪೇ ಕ್ರೆಡಿಟ್ ಕಾರ್ಡ್‌ಗಳು:** ಎರಡನೇ ಹಂತದ ಸಾಲವನ್ನು ಯಶಸ್ವಿಯಾಗಿ ಮರುಪಾವತಿಸುವ ವ್ಯಾಪಾರಿಗಳು ₹30,000 ದವರೆಗೆ ಮಿತಿಯಿರುವ UPI ಸಂಯೋಜಿತ ರೂಪೇ (RuPay) ಕ್ರೆಡಿಟ್ ಕಾರ್ಡ್‌ಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

## ಸ್ವನಿಧಿಯಿಂದ ಸಮೃದ್ಧಿ (SSS):

- ಇದು ಬೀದಿ ಬದಿ ವ್ಯಾಪಾರಿಗಳು ಮತ್ತು ಅವರ ಕುಟುಂಬಗಳಿಗೆ ಸುರಕ್ಷತೆ ಮತ್ತು ಆರೋಗ್ಯವನ್ನು ಒದಗಿಸಲು ಎಂಟು ಕಲ್ಯಾಣ ಕಾರ್ಯಕ್ರಮಗಳೊಂದಿಗೆ ಸಂಪರ್ಕಿಸುವ ಭಾರತ ಸರ್ಕಾರದ ವಿಶೇಷ ಯೋಜನೆಯಾಗಿದೆ.
- **ಮುಖ್ಯ ಉದ್ದೇಶ:** ಇದು ಪಿಎಂ ಸ್ವನಿಧಿ ಯೋಜನೆಯಡಿ ಸಾಲ ಪಡೆದ ವ್ಯಾಪಾರಿಗಳಿಗೆ ಹೆಚ್ಚಿನ ಆರ್ಥಿಕ ಮತ್ತು ಸಾಮಾಜಿಕ ನೆರವು ನೀಡುತ್ತದೆ.
- ಕಾರ್ಯಕರ್ತರು ವ್ಯಾಪಾರಿಗಳ ಮನೆಗಳಿಗೆ ಭೇಟಿ ನೀಡಿ, ಅವರ ಕುಟುಂಬಗಳ ಅಗತ್ಯಗಳನ್ನು ಖುದ್ದಾಗಿ ಪರಿಶೀಲಿಸುತ್ತಾರೆ.
- ಇದು ಯಾವುದೇ ಸಂಕೀರ್ಣವಾದ ಕಾಗದಪತ್ರಗಳ ಪ್ರಕ್ರಿಯೆಯಿಲ್ಲದೆ ಫಲಾನುಭವಿಗಳನ್ನು ವಿವಿಧ ಸರ್ಕಾರಿ ಸೌಲಭ್ಯಗಳಿಗೆ ನೇರವಾಗಿ ಸಂಪರ್ಕಿಸುತ್ತದೆ.

## 8 ಪ್ರಮುಖ ಸೌಲಭ್ಯಗಳು

- **ಜೀವ ವಿಮೆ** (ಪಿಎಂ ಜೀವನ ಜ್ಯೋತಿ ಬಿಮಾ ಯೋಜನೆ)
- **ಅಪಘಾತ ವಿಮೆ**(ಪಿಎಂ ಸುರಕ್ಷಾ ಬಿಮಾ ಯೋಜನೆ)
- **ಉಚಿತ ಬ್ಯಾಂಕ್ ಖಾತೆ**(ಪಿಎಂ ಜನ್ ಧನ್ ಯೋಜನೆ)
- **ಆಹಾರ ಪಡಿತರ** (ಒಂದು ದೇಶ ಒಂದು ಪಡಿತರ ಚೀಟಿ ಯೋಜನೆ)
- **ವೃದ್ಧಾಪ್ಯ ವೇತನವ** (ಪಿಎಂ ಶ್ರಮ ಯೋಗಿ ಮಾನ್ ಧನ್ ಯೋಜನೆ)
- **ಹೆರಿಗೆಯ ಸಮಯದಲ್ಲಿ ಸುರಕ್ಷತೆ ಮತ್ತು ನಗದು ನೆರವು**(ಜನನಿ ಸುರಕ್ಷಾ ಯೋಜನೆ)
- **ತಾಯಿ ಮತ್ತು ಮಗುವಿನ ಆರೋಗ್ಯ**(ಪಿಎಂ ಮಾತೃ ವಂದನಾ ಯೋಜನೆ)
- **ನಿರ್ಮಾಣ ಕಾರ್ಮಿಕರಿಗೆ ಅಗತ್ಯ ನೆರವು** ( ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (BoCW))

